ಬಳುವಳಿಯಾಗಿ ಕತ್ತಿಯೊಂದನ್ನೂ, ಹಾಗೆಯೇ ಪರ್ಯಾಯ ದ್ವೀಪವೊಂದರ ಯುದ್ಧಕ್ಕೆ ಸಂಬಂಧಿಸಿದ ಚರಿತ್ರೆಯ ಹದಿನೈದು ಸಂಪುಟಗಳನ್ನು ನೀಡಿದ್ದನು. ಹಗಿ ಮೊದಲನೆಯದನ್ನು ತನ್ನ ಕನ್ನಡಿಗೆ ನೇತುಹಾಕಿ, ಎರಡನೆಯದನ್ನು ರಫ್‌ನ ಮಾರ್ಗದರ್ಶಿ ಹಾಗೂ ಬೈಲಿಯ ಸಂಚಿಕೆಗಳ ಮಧ್ಯದಲ್ಲಿ ಇರಿಸಿ, ಷೆಲ್ಫ್‌ಗೆ ಸೇರಿಸಿಬಿಟ್ಟಿದ್ದನು. ಹಾಗೆಯೇ ವೃದ್ಧ ಸಂಬಂಧಿಯೊಬ್ಬಳು ನೀಡಿದ್ದ ವರ್ಷಕ್ಕೆ 200 ಪೌಂಡುಗಳಲ್ಲಿ ಬದುಕು ನಡೆಸುತ್ತಿದ್ದನು. ಅವನು ಎಲ್ಲ ಪ್ರಯತ್ನಗಳನ್ನೂ ಮಾಡಿದ್ದನು. ಆರು ತಿಂಗಳ ಕಾಲ ಸ್ಟಾಕ್ ಎಕ್ಸ್‌ಛೇಂಜ್‌ಗೆ ಹೋಗಿದ್ದನು; ಆದರೆ ಗೂಳಿ ಮತ್ತು ಕರಡಿಗಳ ಮಧ್ಯೆ ಈ ಚಿಟ್ಟೆ ಏನು ಮಾಡಬಲ್ಲುದು? ದೀರ್ಘ ಕಾಲದವರೆಗೆ ಟೀ ವ್ಯಾಪಾರಿಯಾಗಿದ್ದನು. ಆದರೆ ಪೆಕೋ ಮತ್ತು ಸೌಚಾಂಗ್‌ನಿಂದ ಬಹುಬೇಗ ಬಳಲಿ ಹೋಗಿದ್ದನು. ಆಮೇಲೆ ಅವನು ಒಣಗಿದ ಶೆರ್ರಿಗಳನ್ನು ಮಾರುವ ಪ್ರಯತ್ನ ಮಾಡಿದನು. ಅದು ಪ್ರತಿಫಲ ನೀಡಲಿಲ್ಲ. ಶೆರ್ರಿ ಸ್ವಲ್ಪ ಜಾಸ್ತಿಯೇ ಒಣಗಿಹೋಗಿತ್ತು. ಕಡೆಗೆ ಅವನೇನೂ ಆಗಲಿಲ್ಲ. ಉಲ್ಲಾಸದಾಯಕವಾದ, ಒಂದು ಪರಿಪೂರ್ಣ ವ್ಯಕ್ತಿತ್ವವಿದ್ದೂ ಯಾವುದೇ ಪರಿಣಾಮವಿಲ್ಲದ ಯುವಕನಾಗಿ, ವೃತ್ತಿ ಏನೊಂದೂ ಇಲ್ಲದೆ ಇದ್ದುಬಿಟ್ಟನು.

ವಿಷಯಗಳನ್ನು ಮತ್ತಷ್ಟು ಜಟಿಲಗೊಳಿಸುವುದಕ್ಕೋ ಎಂಬಂತೆ ಅವನು ಪ್ರೀತಿ ಬೇರೆ ಮಾಡುತ್ತಿದ್ದನು. ಅವನು ಪ್ರೀತಿಸಿದ ಹುಡುಗಿ ಲಾರಾ ಮರ್ಟನ್. ನಿವೃತ್ತ ಕರ್ನಲ್ಲನ ಮಗಳು. ಆತ ಭಾರತದಲ್ಲಿ ತನ್ನೆಲ್ಲ ಉಗ್ರತೆಯನ್ನು, ಜೀರ್ಣಶಕ್ತಿಯನ್ನು ಕಳೆದುಕೊಂಡವನು, ಅವೆರಡನ್ನೂ ಆತ ಪಡೆದುಕೊಳ್ಳಲೇ ಇಲ್ಲ. ಲಾರಾ ಈ ಯುವಕನನ್ನು ಆರಾಧಿಸುತ್ತಿದ್ದಳು. ಅವನು ಅವಳ ಷೂ–ದಾರಗಳನ್ನು ಮುತ್ತಿಕ್ಕುವುದಕ್ಕೂ ಸಿದ್ಧನಿದ್ದನು. ಅವರಿಬ್ಬರೂ ಲಂಡನ್ನಿನಲ್ಲೇ ಅತ್ಯಂತ ಸ್ಫುರದ್ರೂಪಿ ಜೋಡಿಗಳಾಗಿದ್ದರು. ಅವರಿಬ್ಬರ ಬಳಿ ಒಂದು ಚಿಕ್ಕಾಸೂ ಇರಲಿಲ್ಲ. ಕರ್ನಲ್, ಹಗಿಯನ್ನು ತುಂಬಾ ಇಷ್ಟಪಡುತ್ತಿದ್ದನಾದರೂ, ಅವರಿಬ್ಬರ ಎಂಗೇಜ್‌ಮೆಂಟ್ ರೀತಿಯ ಯಾವ ವಿಷಯವನ್ನೂ ಕೇಳಲು ಸಿದ್ಧನಿರಲಿಲ್ಲ. 'ನೀನು ನಿನ್ನದು ಎನ್ನುವಂಥ ಹತ್ತು ಸಾವಿರ ಪೌಂಡುಗಳನ್ನಿಟ್ಟುಕೊಂಡು ನನ್ನ ಹತ್ತಿರ ಬಾ. ಆಗ ನೋಡೋಣವಂತೆ' ಎಂದು ಆತ ಹೇಳಿದ್ದನು. ಆ ದಿನಗಳಲ್ಲಿ ಹಗಿ ತುಂಬಾ ಖಿನ್ನನಾಗಿ ಕಂಡುಬರುತ್ತಿದ್ದನು. ಆಗ ಅವನು ಲಾರಾ ಬಳಿ ಹೋಗಿ ಸಮಾಧಾನ ಪಡೆಯಬೇಕಾಗಿತ್ತು.

ಒಂದು ದಿನ ಬೆಳಿಗ್ಗೆ, ಹಗಿ ಹಾಲಂಡ್ ಪಾರ್ಕ್‌ಗೆ ಹೋಗುವ ಹಾದಿಯಲ್ಲಿ ಮರ್ಟನ್ಸ್ ವಾಸ ಮಾಡುವ ಸ್ಥಳದ ಹತ್ತಿರದಲ್ಲೇ, ತನ್ನ ಆಪ್ತ ಸ್ನೇಹಿತನಾಗಿದ್ದ ಅಲನ್ ಟ್ರೆವರ್‌ನನ್ನು ನೋಡಲು ಹೋದನು. ಅಲನ್ ಟ್ರೆವರ್ ಒಬ್ಬ ಚಿತ್ರ ಕಲಾವಿದ; ನಿಜವೆಂದರೆ, ಈ ಕಾಲದಲ್ಲಿ ಹಲವು ಜನ ಅದರಿಂದ ದೂರವಿರುತ್ತಾರೆ. ಆದರೆ ಟ್ರೆವರ್ ಒಬ್ಬ ಕಲಾವಿದನಾಗಿದ್ದನು. ಕಲಾವಿದರು ಸ್ವಲ್ಪ ವಿರಳರು. ಟ್ರೆವರ್ ವ್ಯಕ್ತಿಗತವಾಗಿ ಒಬ್ಬ ವಿಚಿತ್ರ ಸ್ವಭಾವದ, ಕಲೆಗಳಿಂದ ಕೂಡಿರುವ ಮುಖವುಳ್ಳ ಒರಟು ಮನುಷ್ಯ. ಕೆಂಪಾದ ಒಡ್ಡೊಡ್ಡಾಗಿರುವ ಗಡ್ಡ ಬಿಟ್ಟಿದ್ದನು. ಆದರೆ ಅವನು ತನ್ನ ಕೈಗೆ ಬ್ರಷ್ ತೆಗೆದುಕೊಂಡಾಗ ಮಾತ್ರ ಮಹಾನಿಪುಣನಾಗಿ ಕಂಡುಬರುತ್ತಿದ್ದನು. ಆತ ಸೃಷ್ಟಿಸಿದ ಚಿತ್ರಗಳು ಕುತೂಹಲ ಹುಟ್ಟಿಸುವಂಥವಾಗಿರುತ್ತಿದ್ದವು. ಹಗೀ ಬಗ್ಗೆ ಅವನಿಗಿರುವ ವೈಯಕ್ತಿಕ ಆಕರ್ಷಣೆಯೇ ಕಾರಣವಾಗಿ, ತುಂಬಾ ಇಷ್ಟಪಡುವವನೆಂದೇ ಹೇಳಬೇಕು. 'ಚಿತ್ರ ಕಲಾವಿದನಿಗೆ ಗೊತ್ತಿರಲೇಬೇಕಾದ ಜನರೆಂದರೆ ನೋಡಲು ಸುಂದರವಾಗಿದ್ದು, ಒಂದು ಕಲಾತ್ಮಕ ಸಂತೋಷವನ್ನೂ, ಮಾತಾಡುವುದಕ್ಕೆ ತಿಳಿವಳಿಕೆಯಿದ್ದು ಪ್ರಶಾಂತ ಮುದ್ರೆಯುಳ್ಳವರಾಗಿರಬೇಕು' ಎಂದು ಆತ ಹೇಳುತ್ತಿದ್ದನು. 'ಸೊಬಗುಳ್ಳ ಗಂಡಸರು,